ಸೋಮವಾರ,8 ಅಕ್ಟೋಬರ್ 2018 | ಪುಟಗಳು: 12+4 | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 73
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲ...
VK
ವಿಜಯ ಕರ್ನಾಟಕ



ವಿನೂ ಮಂಕಡ್ ಕ್ರಿಕೆಟ್: 30 ರನ್‌ಗೆ 6 ವಿಕೆಟ್ ಉರುಳಿಸಿ ಮಿಂಚಿದ ಅರ್ಜುನ್ ತೆಂಡುಲ್ಕರ್ P11

ಆಯುಷ್ಮಾನ್ ಭಾರತ್ ಯೋಜನೆಯಡಿ ಎರಡನೇ ಸಲ ಚಿಕಿತ್ಸೆ ಪಡೆಯಲು ಆಧಾರ್ ಕಡ್ಡಾಯ P09

ಮೂರು ವರ್ಷದಲ್ಲಿ ದೇಶದಿಂದ ನಕ್ಸಲ್ ಪೀಡೆ ನಿವಾರಣೆ: ರಾಜನಾಥ್ ಸಿಂಗ್ P10

# ಮಂಗಳೂರಿನಲ್ಲಿ ಸೆಲೆಬ್ರಿಟಿ ಕಬಡ್ಡಿ ಲೀಗ್

**ವಿಕ ಸುದ್ದಿಲೋಕ** ಮಂಗಳೂರು

ಕನ್ನಡ ಚಲನಚಿತ್ರ ಕಾರ್ಮಿಕರ ಮತ್ತು ಕಲಾವಿದರ ಒಕ್ಕೂಟದ ವತಿಯಿಂದ ಕನ್ನಡ ಮತ್ತು ತುಳು ಚಿತ್ರರಂಗದ ನಡುವೆ ಸೌಹಾರ್ದ ನಿರ್ಮಾಣದ ದೃಷ್ಟಿಯಿಂದ ಸೆಲೆಬ್ರಿಟಿ ಕಬಡ್ಡಿ ಲೀಗ್ 2018 ಪಂದ್ಯಾವಳಿ ಕಂಕನಾಡಿ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಿತು.

ಕರಾವಳಿ ಸಮೂಹ ಶಿಕ್ಷಣ ಸಂಸ್ಥೆಗಳ ಸ್ಥಾಪಕಾಧ್ಯಕ್ಷ ಗಣೇಶ್ ಎಸ್. ರಾವ್ ಪಂದ್ಯಾವಳಿ ಉದ್ಘಾಟಿಸಿ, ಕ್ರೀಡೆಗಳು ಸಮಾಜದಲ್ಲಿ ಶಾಂತಿ, ಸೌಹಾರ್ದ ಮತ್ತು ಬಾಂಧವ್ಯ ವೃದ್ಧಿಗೆ ಪೂರಕವಾಗಿವೆ. ಚಿತ್ರರಂಗದ ಕಲಾವಿದರು ಕಬಡ್ಡಿ ಪಂದ್ಯಾವಳಿಗೆ ಒತ್ತು ನೀಡಿರುವುದು ಸ್ವಾಗತಾರ್ಹ. ಇಂಥ ಸಾಂಪ್ರದಾಯಿಕ ಕ್ರೀಡೆಗಳಿಗೆ ಆದ್ಯತೆ ನೀಡಬೇಕಾಗಿದೆ ಎಂದರು.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಸ್ಥಾಪಕಾಧ್ಯಕ್ಷ ಡಾ. ಮಂಜುನಾಥ ಭಂಡಾರಿ ಮಾತನಾಡಿ, ಗ್ರಾಮೀಣ ಕ್ರೀಡೆಯಾಗಿದ್ದ ಕಬಡ್ಡಿ ಇಂದು ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿರುವುದು ಹೆಮ್ಮೆಯ ವಿಚಾರ. ಅದನ್ನು ಇನ್ನಷ್ಟು ಜನಪ್ರಿಯ ಮಾಡುವ ಅಗತ್ಯವಿದೆ. ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕಬಡ್ಡಿ ಪೂರಕ. ಇಲ್ಲಿ ಗ್ರಾಮೀಣ ಕಬಡ್ಡಿ ಪಂದ್ಯಾವಳಿಗೆ ತಾರಾ ಮೆರುಗು ಸಿಕ್ಕಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲಾ ಅಮೆಚೂರು ಕಬಡ್ಡಿ ಅಸೋಸಿಯೇಶನ್ ಅಧ್ಯಕ್ಷ ರಾಕೇಶ್ ಮಲ್ಲಿ, ಕಾರ್ಯದರ್ಶಿ ಪುರುಷೋತ್ತಮ ಪೂಜಾರಿ, ಅಂತಾರಾಷ್ಟ್ರೀಯ ಲೀಗ್ ರೆಫ್ರಿಗಳಾದ ಉದಯ ಚೌಟ, ಪ್ರೇಮನಾಥ ಉಳ್ಳಾಲ್, ಚಿತ್ರ ನಿರ್ದೇಶಕ ವಿಜಯ ಕುಮಾರ್ ಕೊಡಿಯಾಲ್‌ಬೈಲ್, ಮಹಾಬಲ ಪೂಜಾರಿ ಕಡಂಬೋಡಿ, ತುಳು ಚಿತ್ರ ನಿರ್ಮಾಪಕ ಸಂಘದ ಅಧ್ಯಕ್ಷ ರಾಜೇಶ್ ಬ್ರಹ್ಮಾವರ ಮತ್ತಿತರರು ಉಪಸ್ಥಿತರಿದ್ದರು. ಪಂದ್ಯಾವಳಿಯಲ್ಲಿ ಪುರುಷರ ಏಳು ಮತ್ತು ಮಹಿಳೆಯರ ಆರು ಸೇರಿದಂತೆ ಒಟ್ಟು 13 ತಂಡಗಳು ಭಾಗವಹಿಸಿದ್ದವು. ಪುರುಷರ ಹಾಗೂ ಮಹಿಳೆಯರ ಪಂದ್ಯಾವಳಿ ಏಕಕಾಲದಲ್ಲಿ ದಿನವಿಡೀ ನಡೆಯಿತು. ಕ್ರೀಡಾಸಕ್ತರು ಭಾಗವಹಿಸಿ, ನೆಚ್ಚಿನ ತಂಡಗಳಿಗೆ ಪ್ರೋತ್ಸಾಹ ನೀಡಿದರು.



ಸೆಲೆಬ್ರಿಟಿ ಲೀಗ್‌ನಲ್ಲಿ ಮಹಿಳೆಯರ ಕಬಡ್ಡಿ ಪಂದ್ಯಾವಳಿ.



ಉದ್ಘಾಟನೆ ಸಮಾರಂಭದಲ್ಲಿ ಪಾಲ್ಗೊಂಡ ಗಣ್ಯರು.

ಮುಂಜಾನೆ ಮಾತು
ಕನ್ನಡಿ ಮತ್ತು ನೆರಳುಗಳಂತಹ ಸ್ನೇಹಿತರನ್ನು ಸಂಪಾದಿಸೋಣ. ಕನ್ನಡಿ ಸುಳ್ಳು ಹೇಳುವುದಿಲ್ಲ, ನೆರಳು ನಮ್ಮನ್ನು ಬಿಟ್ಟು ಅಗಲುವುದಿಲ್ಲ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ. 1 ಕನ್ನಡ ದಿನಪತ್ರಿಕೆ

ಬೆಂಗಳೂರು ● ಮಂಗಳೂರು ● ಹುಬ್ಬಳ್ಳಿ ● ವಿಜಯಪುರ ● ಮೈಸೂರು ● ಗಂಗಾವತಿ ● ಚಿತ್ರದುರ್ಗ ● ಶಿವಮೊಗ್ಗ ● ಕಲಬುರಗಿ ● ಬೆಳಗಾವಿ
VIJAYAVANI ● MANGALURU
ಮಂಗಳೂರು ● ಸಂಪುಟ 7 ● ಸಂಚಿಕೆ 190
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682
8 ಅಕ್ಟೋಬರ್ 2018 | ಸೋಮವಾರ

CENTRAL LIBRARY
Page No.

# ವರ್ಣರಂಜಿತ ಕಳೆ ತಂದ ಸೆಲೆಬ್ರಿಟಿ ಕಬಡ್ಡಿ ಲೀಗ್

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಚಿತ್ರದಲ್ಲಿ ನಟಿಸಿ ಪ್ರೇಕ್ಷಕರಿಗೆ ಮನರಂಜನೆ ನೀಡುವ ಕಲಾವಿದರು ಭಾನುವಾರ ಚಡ್ಡಿ, ಬನಿಯನ್ ಧರಿಸಿ ಕಬಡ್ಡಿ ಆಡುವ ಮೂಲಕ ಮನರಂಜನೆ ನೀಡಿದರು. ಈ ಮೂಲಕ ಚಿತ್ರ ರಂಗದ ಕಲಾವಿದರು ನಟನೆಗೆ ಮಾತ್ರವಲ್ಲ, ಕಬಡ್ಡಿ ಆಟಕ್ಕೂ ಸೈ ಎನಿಸಿಕೊಂಡರು.

» **7 ಪುರುಷರ, 6 ಮಹಿಳೆಯರ ತಂಡ ಸೇರಿ 13 ತಂಡ ಭಾಗಿ**

ಕನ್ನಡ ಮತ್ತು ತುಳು ಚಿತ್ರರಂಗದ ನಡುವೆ ಸೌಹಾರ್ದ ಗಟ್ಟಿಯಾಗುವ ಉದ್ದೇಶದಿಂದ ಕನ್ನಡ ಚಲನಚಿತ್ರ ಕಾರ್ಮಿಕರ ಮತ್ತು ಕಲಾವಿದರ ಒಕ್ಕೂಟ ವತಿಯಿಂದ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಸೆಲೆಬ್ರಿಟಿ ಕಬಡ್ಡಿ ಲೀಗ್ 2018 ಟೂರ್ನಿ ಆಯೋಜಿಸಿದ್ದರು.

7 ಪುರುಷರ ಹಾಗೂ 6 ಮಹಿಳೆಯರ ಸೇರಿದಂತೆ ಒಟ್ಟು 13 ತಂಡಗಳು ಟೂರ್ನಿಯಲ್ಲಿ ಭಾಗವಹಿಸಿದ್ದವು. ಪುರುಷರ ಹಾಗೂ ಮಹಿಳೆಯರ ಪಂದ್ಯಾಟ ಏಕಕಾಲದಲ್ಲಿ ನಡೆಯಿತು.

**ಉದ್ಘಾಟನೆ:** ಕರಾವಳಿ ಸಮೂಹ ಶಿಕ್ಷಣ ಸಂಸ್ಥೆಗಳ ಸ್ಥಾಪಕಾಧ್ಯಕ್ಷ ಎಸ್.ಗಣೇಶ್ ರಾವ್ ಟೂರ್ನಿ ಉದ್ಘಾಟಿಸಿದರು. ಕ್ರೀಡೆ ಸೌಹಾರ್ದ, ಬಾಂಧವ್ಯ ವೃದ್ಧಿಗೆ ಸಹಾಯಕ. ಚಿತ್ರ ರಂಗದ ಕಲಾವಿದರು ಕಬಡ್ಡಿಗೆ ಒತ್ತು ನೀಡಿರುವುದು ಗಮನಾರ್ಹ ಎಂದರು.



ಮಂಗಳೂರಿನಲ್ಲಿ ನಡೆದ ಸೆಲೆಬ್ರಿಟಿ ಕಬಡ್ಡಿ ಲೀಗ್ ಟೂರ್ನಿ.

ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಕಾಧ್ಯಕ್ಷ ಡಾ.ಮಂಜುನಾಥ ಭಂಡಾರಿ ಮಾತನಾಡಿದರು. ದಕ್ಷಿಣ ಕನ್ನಡ ಜಿಲ್ಲಾ ಅಮೆಚೂರು ಕಬಡ್ಡಿ ಅಸೋಸಿಯೇಶನ್ ಅಧ್ಯಕ್ಷ ರಾಕೇಶ್ ಮಲ್ಲಿ, ಕಾರ್ಯದರ್ಶಿ ಪುರುಷೋತ್ತಮ ಪೂಜಾರಿ, ಅಂತಾರಾಷ್ಟ್ರೀಯ ಲೀಗ್ ರೆಫ್ರಿಗಳಾದ ಉದಯ ಚೌಟ, ಪ್ರೇಮನಾಥ ಉಳ್ಳಾಲ್, ಚಿತ್ರ ನಿರ್ದೇಶಕ ವಿಜಯ ಕುಮಾರ್ ಕೊಡಿಯಾಲಬೈಲು, ಮಹಾಬಲ ಪೂಜಾರಿ ಕಡಂಬೋಡಿ, ತುಳು ಚಿತ್ರ ನಿರ್ಮಾಪಕ ಸಂಘ ಅಧ್ಯಕ್ಷ ರಾಜೇಶ್ ಬ್ರಹ್ಮಾವರ ಮೊದಲಾದವರು ಉಪಸ್ಥಿತರಿದ್ದರು.